ವ್ಯಕ್ತಿಯಲ್ಲಿ ಅದೆಂತ ಮಂಗಳಾತಿ ಮಂಗಳಮುಖಿಯಾದರೂ ಎರಡೂ ಲಿಂಗದ ಅಂಗಾಂಗಗಳು ಪೂರ್ಣಪ್ರಮಾಣದಲ್ಲಿ ಇರುತ್ತವೆ ಎಂದು ಹೇಳಿರುವುದನ್ನು ತಿಳಿಯಲಾಗಲಿಲ್ಲ. ಅಥವಾ ನನಗೆ ಕಾಣಲಿಲ್ಲ. ಬೆಂಗಳೂರಿನಲ್ಲಿದ್ದ ನನ್ನ ಗೇ ಗೆಳೆಯನೊಬ್ಬನಿಗೆ ವಾಟ್ಸಾಪು ಫೋನು ಮಾಡಿದೆ. ಹೇಗಿದ್ದರೂ ಎಲ್‌ಜಿಬಿಟಿಕ್ಯೂ ತಾನೇ. ಅವರಿಗೆ ಇವರದ್ದು, ಇವರಿಗೆ ಅವರದ್ದು ಗೊತಿರುತ್ತದೆ ಎಂದು ನನ್ನ ಉಡಾಫೆ. ಆತ ನನ್ನನ್ನು ಮಾನ ಮರ್ಯಾದೆ ನೋಡದೇ ಬಯ್ದೇ ಬಿಟ್ಟ. 'ನಾನು ಸ್ಟ್ರೈಟ್ ಗೇ. ನನಗೆ ನನ್ನ ಪಾರ್ಟನರಿನ ಗಡ್ಡದ ಕೂದಲಿಷ್ಟ. ಡೆಫಿನೈಟ್‌ಲೀ ನಾಟ್ ಮೇಕಪ್. ನಮ್ಮ ಜತೆ ಬಾರಿಗೆ ಬರ್ತಾರೆ ಎಲ್ಲತರದವರೂ. ಆದರೆ ನನ್ನ ಟೈಪಲ್ಲ' ಎಂದು ಮಧ್ಯರಾತ್ರಿ ನಿದ್ರೆಯಿಂದ ಎಬ್ಬಿಸಿದ್ದಕ್ಕೆ ಬಯ್ದು ಮಲಗಿದ.

ಮಾರಿಸ್ ಕೆಲಸ ಮಾಡುತ್ತಿದ್ದ ಆಸ್ಪತ್ರೆಯಲ್ಲಿ 24 ಗಂಟೆಯೂ ಎಂಆರ್‌ಐ ಮಾಡಿಸುವ ಸೌಕರ್ಯವಿತ್ತು. ಮಾರಿಸ್ ಅಂದು ಕೆಲಸ ಮಾಡುತ್ತಿದ್ದಾನೋ ಇಲ್ಲವೋ ಅದೂ ಗೊತ್ತಿರಲಿಲ್ಲ. ನಿಕಿಟಾಳ ಹತ್ತಿರ ಹೋಗಿ ಕೂತು ನಾನು ವಿವರವಾಗಿ ಮಾತಾಡಿದಾಗ ಆಕೆ ತಾನು ಹುಟ್ಟಾ ಹೆಣ್ಣೆಂದೂ ಈಗ ಹಾರ್ಮೋನುಗಳನ್ನು ತೆಗೆದುಕೊಂಡ ಮೇಲೆ ಹೊರರೂಪ ಬದಲಾಗಿದೆ, ಆದ್ದರಿಂದ ತನಗೆ ಓವರಿಗಳಿರಲೇಬೇಕು. ತಾನು ಯಾವ ಆಪರೇಷನ್ ಅನ್ನೂ ಮಾಡಿಸಿಕೊಂಡಿಲ್ಲ ಎಂದು ಖಡಾಖಂಡಿತವಾಗಿ ಹೇಳಿದಳು. ಆಕೆಯ ಹೊಟ್ಟೆಯ ಮೇಲೆ ಯಾವ ಆಪರೇಷನ್ ಮಾಡಿದ ಗುರುತೂ ಇರಲಿಲ್ಲ. ನಾನು ಈ ವಿಷಯದ ಬಗ್ಗೆ ಎಷ್ಟೇ ತಲೆಕೆಡಿಸಿಕೊಂಡರೂ ನಮ್ಮಾಸ್ಪತ್ರೆಯಲ್ಲಿ ಏನನ್ನೂ ಸಾಧಿಸಲಾಗದು ಎಂದು ಮನಗಂಡು ಅಂದೇ ಎಂಆರ್‌ಐ ಮಾಡಿಸಲೇಬೇಕಾದರೆ ನಮ್ಮದೇ ಇನ್ನೊಂದು ಆಸ್ಪತ್ರೆಗೆ ಹೋಗಬೇಕಾಗುತ್ತದೆ, ಅಲ್ಲಿನ ಡಾಕ್ಟರುಗಳಿಗೆ ಫೋನು ಮಾಡಿ ನಾನು ಎಲ್ಲ ವ್ಯವಸ್ಥೆ ಮಾಡುತ್ತೇನೆ ಎಂದು ಇನ್ನೊಂದು ವೆಸ್ಟ್‌ಹೆಲ್ತ್‌ಗೆ ಫೋನುಮಾಡಿ ಡ್ಯೂಟಿಯಲ್ಲಿ ಮಾರಿಸ್ ವಿಲಿಯಮ್ ಇದ್ದಾರಾ ಎಂದು ಕೇಳಿದೆ. ರಿಸೆಪ್ಷನಿಸ್ಟ್, 'ಓ... ಡಾ. ಮಾರಿಸ್ ವಿಲಿಯಮ್... ಹ್ಮ್... ಅವರು... ಅವರಿಲ್ಲ. ಆದರೆ 'ಡಾ ಮೆಲಿಸ್ಸಾ ರಫೇಲ್' ಇದ್ದಾರೆ. ಅವರಿಗೆ ಕನೆಕ್ಟ್ ಮಾಡುತ್ತೀನಿ' ಎಂದು ಹೇಳಿ ಆಕೆಗೆ ಫೋನನ್ನು ಕನೆಕ್ಟ್ ಮಾಡಿದಳು.

ನಾನು ಡಾ. ರಫೇಲ್ ಜತೆ ಮಾತಾಡುತ್ತಾ ನಿಕಿಟಾಳ ಕಥೆಯನ್ನು ಹೇಳಿ ಆಕೆಗೆ ಈ ಸಂಜೆ ಎಂಆರ್‌ಐ ಮಾಡಿಸಬೇಕಾದ ತುರ್ತಿನ ಬಗ್ಗೆ ಹೇಳಿ ಆಕೆಯನ್ನು ಅಲ್ಲಿಗೆ ಕಳಿಸುತ್ತೇನೆ ಎಂದು ಹೇಳಿದೆ. ಡಾ. ರಫೇಲ್ ಎಂಬ ವ್ಯಕ್ತಿ, 'ಸೂರಿ, ನಾನು ಮಾರಿಸ್. ನೀನು ಆಕೆಯನ್ನು ಇಲ್ಲಿಗೆ ಇಂದು ರಾತ್ರಿ ಕಳಿಸುವ ತುರ್ತಿಲ್ಲ.' ಎಂದು ಖಡಾಖಂಡಿತವಾಗಿ ಹೇಳಿತು. ನಾನು, 'ನಿಕಿಟಾ ತನಗೆ ಓವರಿಗಳಿದ್ದಾವೆ ಎಂದು ಖಂಡಿತವಾಗಿ ಹೇಳುತ್ತಾ ಇದ್ದಾಳೆ' ಎಂದೆ.

ಮಾರಿಸ್ ಈ ಕಳೆದ ಒಂದು ವರ್ಷದಲ್ಲಿ ಡಾ. ಮೆಲಿಸ್ಸಾ ರಫೇಲ್ ಆಗಿದ್ದ. ನಾನು ಆ ವಿಷಯದ ಬಗ್ಗೆ ಯಾವ ಓಂಪ್ರಥಮವೂ ಮಾಡದೇ ನೇರವಾಗಿ ನನ್ನ ರೋಗಿಯ ಬಗ್ಗೆ ವೃತ್ತಿಪರವಾಗಿ ಮಾತಾಡಲು ಶುರುಮಾಡಿದೆ. ಆಕಡೆ ಡಾ. ರಫೇಲ್‌ಗೆ ಕೊಂಚ ಪಿರಿಪಿರಿಯಾದದ್ದು ಫೋನಿನಲ್ಲಿ ಗೊತ್ತಾಯಿತು.

ನನಗದು ದೊಡ್ಡ ವಿಷಯ ಎಂದನಿಸಿರಲೇ ಇಲ್ಲ. ಆತ ಹೀಗೇ ಆಗುತ್ತೇನೆ ಎಂದು ನಾನು ಖಚಿತವಾಗಿ ನಂಬಿದ್ದೆ ಅನಿಸುತ್ತದೆ. ಆದರೂ ಈಗ ಈ ಡಾ. ಮೆಲಿಸ್ಸಾ ಯಾವ ಘಟ್ಟದ ಸ್ಥಿತ್ಯಂತರದಲ್ಲಿದ್ದಾಳೆ. ವೆಸ್ಟ್‌ಹೆಲ್ತ್ ಆತ ಆಕೆಯಾಗುವುದಕ್ಕೆ ವಿಮಾ ಖರ್ಚಿನಿಂದ ಪಾವತಿ ಮಾಡಿತೇ? ಈಗ ಮೆಲಿಸ್ಸಾ ಗಂಡಸರ ಬಾತ್‌ರೂಮು ಉಪಯೋಗಿಸಬೇಕಾಗಿಲ್ಲವಾ? ಇವೆಲ್ಲ